ಎಂಎಲ್‌ಎ ಆಸ್ಪತ್ರೆಗೆ ಹೋದ ಸ್ವಲ್ಪ ಹೊತ್ತಿನಲ್ಲಿ ಆಂಬುಲೆನ್ಸ್ ಸಹಿತ ಹಿಂದಿರುಗಿದ. ಆ ಆಫೀಸರನ ಬೆವರಿಳಿಸಿ ಒಂದು ಪೈಸೆ ಕೊಡದೆ ಹೆಣ ತಂದಿದ್ದೇನೆ. ಇನ್ನು ಮತ ಪಂಡಿತರು ಕ್ರಮ ಶುರು ಮಾಡಿ. ಆಮೇಲೆ ಖಬರ್‌ಸ್ಥಾನದಲ್ಲಿ ದಫನ್ ಮಾಡೋಣ ಎಂದವನ ಸಾಹಸವನ್ನು ಮೆಚ್ಚಿ ಹಿಂಬಾಲಕರು ಜೈಕಾರ ಹಾಕಿದರು. ಮತ ಪಂಡಿತರು ಹೆಣದ ಸುತ್ತ ಮುತ್ತ ಮೇಲೆ ಸುಗಂಧ ದ್ರವ್ಯ ಸುರಿದು ಊದಿನಕಡ್ಡಿ, ಲೋಬಾನ ಹಚ್ಚಿ ಕುರಾನ್ ಓದತೊಡಗಿದರು. ಅದುವರೆಗೆ ಹೊಟ್ಟೆ ಹಸಿವನ್ನು ಹೇಗೋ ತಾಳಿಕೊಂಡಿದ್ದ ಅವಳು ಇನ್ನೇನು ಬೀಳುವಂತಾಗಿ ನಿಧಾನವಾಗಿ ಕುಕ್ಕುರುಗಾಲಲ್ಲಿ ಕೂತುಕೊಂಡಳು.

ಸ್ವಲ್ಪ ಹೊತ್ತಿನಲ್ಲಿ ಹೆಣವನ್ನು ಖಬರ್‌ಸ್ಥಾನಕ್ಕೆ ಕೊಂಡು ಹೋಗಿ ದಫನ್ ಮಾಡಿ ಬಿಡುತ್ತಾರೆ. ಅಲ್ಲಿಗೆ ಐದು ವರ್ಷಗಳ ತನ್ನ ಸಾಂಸಾರಿಕ ಜೀವನ ಅಂತ್ಯವಾಗುತ್ತದೆ. ಒಂದು ರೀತಿಯಿಂದ ಅಲ್ಲಾ ಒಳ್ಳೇದನ್ನೇ ಮಾಡಿದ. ಗಂಡ ತೀರಿ ಹೋದ ಮೇಲೆ ತನ್ನ ಹೊಟ್ಟೆಯನ್ನು ಹೊರೆಯುವುದೇ ದೊಡ್ಡ ಸಮಸ್ಯೆ, ತನಗೆ ಎರಡೋ ಮೂರೋ ಮಕ್ಕಳಾಗುತ್ತಿದ್ದರೆ ಅವು ಹೊಟ್ಟೆಗಿಲ್ಲದೆ ಸತ್ತು ಹೋಗಬೇಕಿತ್ತು.

ಅವಳಿಗೆ ಗಂಡನ ಮುಖವನ್ನು ಕೊನೆಯ ಬಾರಿಗೆ ನೋಡಬೇಕೆಂದಾಗಿ ಮತ ಪಂಡಿತರಲ್ಲಿ ಪಿಸುಗುಟ್ಟಿದಳು. ಇಷ್ಟು ಚೆನ್ನಾಗಿ ಪ್ಯಾಕ್ ಮಾಡಿದ ಹೆಣದ ಪ್ಲಾಸ್ಟಿಕ್ಕು ಬಿಚ್ಚ ಬೇಕಲ್ಲಮ್ಮ? ಅವನಿಗೆ ಬಂದ ಕೊರೊನಾ ನಮಗೂ ವಕ್ಕರಿಸಿದರೆ ಗತಿಯೇನು? ಏನು ಬೇಕಾದರೂ ಆಗಲಿ ಮತ ಪಂಡಿತರೇ ಕೊನೆಗೆ ಒಂದೇ ಒಂದು ಬಾರಿ ಅವನ ಮುಖ ನೋಡಿ ಬಿಡುತ್ತೇನೆ.

ಮತ ಪಂಡಿತರು ಮಸೀದಿಯ ಕಸ ಗುಡಿಸುವವನನ್ನು ಕರೆದು ಹೆಣದ ಮುಖದ ಪ್ಲಾಸ್ಟಿಕ್ಕನ್ನು ಬಿಚ್ಚುವಂತೆ ಹೇಳಿದರು. ಅವಳು ಹಸಿವಿನಿಂದಲೂ, ಭೀತಿಯಿಂದಲೂ ಥರಗುಟ್ಟುವ ಮೈಯನ್ನು ಹೇಗೆ ಹೇಗೋ ನಿಯಂತ್ರಿಸಿಕೊಂಡು ಹೆಣದ ಬಳಿಗೆ ಸಾಗಿದಳು. ಹೆಣದ ಮುಖ ನೋಡಿದವಳೇ ಹೆದರಿ ಏ ಅಲ್ಲಾ ಎಂದು ಕಿರುಚಿ ಧಡಾಲನೆ ಬಿದ್ದು ಬಿಟ್ಟಳು. ಅಲ್ಲಿ ಬೇರಾರು ಹೆಂಗಸರಿರಲಿಲ್ಲ. ಹೆಣ ಖಬರ್‌ಸ್ಥಾನಕ್ಕೆ ಹೋಗುವಾಗ ಹೆಂಗಸರು ಇರಬಾರದು. ಅವಳ ಶುಶ್ರೂಷೆ ಮಾಡುವುದೋ, ಹೆಣದ ಮುಖ ನೋಡುವುದೋ ಎಂಬ ಗೊಂದಲದಿಂದ ಮತ ಪಂಡಿತರು ತೊಳಲಾಡುತ್ತಿದ್ದರು. ಅದುವರೆಗೆ ಹೆಣವನ್ನು ನೋಡಲು ಮುಗಿಬೀಳುತ್ತಿದ್ದ ಜನರನ್ನು ನಿಯಂತ್ರಿಸಲು ಹೆಣಗಾಡುತ್ತಿದ್ದ ಎಂಎಲ್‌ಎ ಮತ ಪಂಡಿತರನ್ನು ಪ್ರಶ್ನಾರ್ಥಕವಾಗಿ ನೋಡಿ ಈ ಮುದುಕನಿಗೆ ಹೆಣದ ಮುಖ ನೋಡುವ ಧೈರ್ಯವಿಲ್ಲವೆಂದು ಖಾತ್ರಿ ಮಾಡಿಕೊಂಡು ತಾನೇ ಮುಂದೆ ಬಂದು ನೋಡಿದ. ಮೊದಲು ಕಣ್ಣುಗಳಿದ್ದ ಜಾಗದಲ್ಲಿ ಕಣ್ಣುಗಳೇ ಇರಲಿಲ್ಲ. ಎರಡು ಆಳದ ಗುಂಡಿಗಳಾಗಿ ಮುಖ ಗುರುತು ಹಿಡಿಯಲಾಗದಷ್ಟು ಬೀಭತ್ಸವಾಗಿತ್ತು. ಅವನಿಗೆ ಇನ್ನೊಂದು ಸಂಶಯ ಬಂದು ಆಳಿನಿಂದ ದೇಹದ ಪ್ಲಾಸ್ಟಿಕ್ಕು ಪೂರ್ತಿ ಬಿಚ್ಚಿಸಿದ. ಕಿಡ್ನಿ ಇದ್ದ ಜಾಗದಲ್ಲೂ ಒಂದು ಆಳದ ಗುಂಡಿಯ ಹೊರತಾಗಿ ಬೇರೇನೂ ಇರಲಿಲ್ಲ.

ಎಂಎಲ್‌ಎ ಗೊಂದಲದಲ್ಲಿ ಮುಳುಗಿದ. ಮೊದಲು ಶವ ಸಂಸ್ಕಾರಕ್ಕೆ ಹೆಣವನ್ನು ಖಬರ್‌ಸ್ಥಾನಕ್ಕೆ ಸಾಗಿಸುವುದೋ, ಇಲ್ಲ ಆಸ್ಪತ್ರೆಯ ವೈದ್ಯಾಧಿಕಾರಿಯನ್ನು ತರಾಟೆಗೆ ತೆಗೆದುಕೊಳ್ಳುವುದೋ ಎಂದವನಿಗೆ ಹೊಳೆಯಲಿಲ್ಲ. ಮತ ಪಂಡಿತರಲ್ಲಿಗೆ ಹೋಗಿ ಕಿವಿಯಲ್ಲಿ ಪಿಸುಗುಟ್ಟಿದ. ಮತ ಪಂಡಿತರು ದಿಗ್ಭ್ರಾಂತರಾಗಿ ನಿಂತು ಬಿಟ್ಟರು. ಅಂಗಾಂಗಗಳು ಮಾಯವಾದ ಯಾವುದೇ ಹೆಣವನ್ನು ಅವರು ಇದುವರೆಗೆ ಖಬರ್‌ಸ್ಥಾನದಲ್ಲಿ ದಫನ ಮಾಡಿದವರಲ್ಲ. ಆ ಸುವ್ವರ್‌ಕೇ ಬಚ್ಚೇ ವೈದ್ಯಾಧಿಕಾರಿ ತಾನು ಕದ್ದ ಕಣ್ಣುಗಳನ್ನು ಮತ್ತು ಕಿಡ್ನಿಗಳನ್ನು ಮರ್ಯಾದೆಯಿಂದ ತಂದು ಹೆಣಕ್ಕೆ ಜೋಡಿಸಲಿ ಎಂದರು. ಎಂಎಲ್‌ಎ ಎಂದಿನ ಗತ್ತಿನಲ್ಲಿ ಆಸ್ಪತ್ರೆಗೆ ಫೋನು ಮಾಡಿ ವೈದ್ಯಾಧಿಕಾರಿಯನ್ನು ಸಂಪರ್ಕಿಸಿ ಮರ್ಯಾದೆಯಿಂದ ನೀನು ಕದ್ದ ನಮ್ಮವನ ಅಂಗಾಂಗ ಜೋಡಿಸು. ಇಲ್ಲದಿದ್ದರೆ ನಿನ್ನನ್ನು ಜೀವಂತವಾಗಿ ಖಬರ್‌ಸ್ಥಾನದಲ್ಲಿ ಹೂಳುತ್ತೇನೆ. ಉಲ್ಲೂ ಕಾ ಪಟ್ಟೇ ಎಂದು ಅಬ್ಬರಿಸಿದ. ಜನಗಳಿಗೂ